# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

*ಆತ್ಮೀಯ ಕಾರ್ಮಿಕರೇ,*

**ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರವು ಹಲವು ಕಾನೂನುಗಳನ್ನು ರಚಿಸಿದ್ದು ಅವುಗಳಲ್ಲಿ ಕೆಲವನ್ನು ಈ ಕೆಳಗೆ ಹೇಳಲಾಗಿದೆ. ಕಾರ್ಖಾನೆಯ ಮಾಲೀಕರು ಈ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಒಂದೊಮ್ಮೆ ಜಾರಿಗೆ ತರದಿದ್ದ ಪಕ್ಷದಲ್ಲಿ ಆಡಳಿತ ವರ್ಗದ ವಿರುದ್ಧ ಕಾರ್ಮಿಕ ಇಲಾಖೆಗೆ ದೂರನ್ನು ನೀಡಬೇಕು. ಕಾರ್ಮಿಕರೂ ಸಹ ಈ ಕಾನೂನುಗಳ ಅರಿವು ಇರಬೇಕು.**

- ಕೆಲಸಕ್ಕೆ ಸೇರಿದ ತಕ್ಷಣವೇ ಪ್ರತಿಯೊಬ್ಬ ಕಾರ್ಮಿಕರಿಗೂ ವಿವರವಾದ ನೇಮಕಾತಿ ಪತ್ರ ಕೊಡಬೇಕು.
- ಪ್ರತಿ ತಿಂಗಳೂ ವೇತನ ನೀಡುವ ಸಂದರ್ಭದಲ್ಲಿ ವಿವರವಾದ ವೇತನ ಚೀಟಿ ನೀಡಬೇಕು.
- ಪ್ರತಿ ತಿಂಗಳೂ 10ನೆಯ ದಿನಾಂಕದೊಳಗೆ ವೇತನ ಪಾವತಿಸಬೇಕು.
- 240 ದಿನ ಕೆಲಸ ಮಾಡಿದ ಕಾರ್ಮಿಕರನ್ನು **"ಖಾಯಂ ಕಾರ್ಮಿಕ"**ರೆಂದು ಪರಿಗಣಿಸಬೇಕು.
- ಯಾವುದೇ ಸಂದರ್ಭದಲ್ಲಿಯೂ ಲಿಖಿತ ಕಾರಣ ನೀಡದೆ, ಕಾರ್ಮಿಕರನ್ನು ಕೆಲಸದಿಂದ ತೆಗೆಯುವಂತಿಲ್ಲ.
- ಪ್ರತಿ 20 ಕೆಲಸದ ದಿನಕ್ಕೆ 1 ದಿನ **'ಗಳಿಕೆ ರಜೆಯಾಗಿ'** ಕಾರ್ಮಿಕರ ಖಾತೆಗೆ ಸೇರುತ್ತದೆ. (ಪ್ರತಿ ವರ್ಷ ಜನವರಿ 1 ರಿಂದ ಡಿಸೆಂಬರ್ 31 ಅವಧಿಗೆ ಲೆಕ್ಕ ಹಾಕಲಾಗುತ್ತದೆ)
- ಕಾರ್ಮಿಕರಿಗೆ ರಜೆಯ ಅವಶ್ಯಕತೆ ಇರುವಾಗ ಅನುಮತಿಯೊಂದಿಗೆ ತಮ್ಮ ಗಳಿಕೆ ರಜೆಯನ್ನು ಉಪಯೋಗಿಸಿಕೊಳ್ಳಲು ಹಕ್ಕಿದೆ.
- ತುರ್ತು ಸಂದರ್ಭದಲ್ಲಿ, ಮುಂಚಿತವಾಗಿಯೇ ಅನುಮತಿ ಪಡೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ರಜೆ ತೆಗೆದುಕೊಂಡ ಮರುದಿನ ಆಡಳಿತ ವರ್ಗಕ್ಕೆ ರಜೆ ಚೀಟಿಯನ್ನು ಕೊಡಬೇಕು.
- 240 ದಿನಗಳು ಕೆಲಸ ಮಾಡಿ, ಕೆಲಸ ಬಿಟ್ಟ ಕಾರ್ಮಿಕರಿಗೆ, ಅವರ ಖಾತೆಯಲ್ಲಿರುವ **'ಗಳಿಕೆ ರಜೆ'**ಯ ವೇತನವನ್ನು ಪಡೆದುಕೊಳ್ಳುವ ಹಕ್ಕಿದೆ.
- ವರ್ಷಕ್ಕೊಮ್ಮೆ ಕನಿಷ್ಠ **8.33% ಬೋನಸ್** ಕೊಡಬೇಕು.
- ಮೂರು ತಿಂಗಳು ಕೆಲಸ ಮಾಡಿ ಕೆಲಸ ಬಿಟ್ಟ ಕಾರ್ಮಿಕರಿಗೂ ಬೋನಸ್ ಕೊಡಬೇಕು.
- ಕಾರ್ಮಿಕರನ್ನು ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ವರ್ಗಾವಣೆ ಮಾಡಿದಾಗ ಅವರಿಗೆ ಲಿಖಿತ ಆದೇಶ ನೀಡಬೇಕು.
- ಕಾರ್ಮಿಕರು ಕಾರ್ಮಿಕ ಸಂಘದಲ್ಲಿ ಸದಸ್ಯರಾಗಲು ಹಕ್ಕಿದೆ.
- ಕಾರ್ಮಿಕರು ಕೆಲಸ ಮಾಡುವ ಜಾಗದಲ್ಲಿ ಸ್ವಚ್ಛ ಗಾಳಿ ಮತ್ತು ಬೆಳಕು ಇರುವಂತೆ ನೋಡಿಕೊಳ್ಳಬೇಕು.
- 30 ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿರುವ ಕಾರ್ಖಾನೆಯಲ್ಲಿ ಅವರ 5 ವರ್ಷದವರೆಗಿನ ಮಕ್ಕಳನ್ನು ನೋಡಿಕೊಳ್ಳಲು ಬಾಲವಾಡಿ ಇರಬೇಕು ಮತ್ತು ತರಬೇತಿ ಹೊಂದಿರುವ ಶಿಕ್ಷಕರು, ಆಯಾ ಇರಬೇಕು,.
- 500 ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಯಲ್ಲಿ ವೈದ್ಯರ ವ್ಯವಸ್ಥೆ ಇರಬೇಕು.
- 250 ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಯಲ್ಲಿ ಕ್ಯಾಂಟೀನ್ ವ್ಯವಸ್ಥೆ ಇರಬೇಕು.
- ಕೆಲಸ ಮಾಡುವ ಸಮಯದಲ್ಲಿ ಕಾರ್ಮಿಕರು ಕುಳಿತುಕೊಳ್ಳಲು ವ್ಯವಸ್ಥೆ ಮಾಡಬೇಕು.
- ಕಾರ್ಮಿಕರಿಗೆ ಶುದ್ಧವಾದ ಕುಡಿಯುವ ನೀರು ಪೂರೈಸಬೇಕು.
- ಕಾರ್ಖಾನೆಯಲ್ಲಿ ಕಾರ್ಮಿಕರ ವಿಶ್ರಾಂತಿಗಾಗಿ ಕೊಠಡಿ ಇರಬೇಕು.
- ಗರ್ಭಿಣಿಯರಿಗೆ ಕೆಲಸದಲ್ಲಿ ರಿಯಾಯತಿ ಕೊಡಬೇಕು.
- ಬಲವಂತವಾಗಿ ಓ.ಟಿ ಮಾಡಿಸುವಂತಿಲ್ಲ. ಕಾರ್ಮಿಕರು ಇಷ್ಟ ಪಟ್ಟು ಓ.ಟಿ. ಮಾಡಿದರೆ ಅದಕ್ಕೆ ಎರಡರಷ್ಟು ವೇತನ ನೀಡಬೇಕು.
- ದಿನಕ್ಕೆ 1 ಗಂಟೆಗಿಂತ ಹೆಚ್ಚು ಕಾಲ ಓ.ಟಿ. ಮಾಡಿಸುವಂತಿಲ್ಲ. ಮತ್ತು ತಿಂಗಳಲ್ಲಿ 25 ಗಂಟೆಗಳಿಗಿಂತ ಹೆಚ್ಚು ಓ.ಟಿ. ಕೆಲಸ ಮಾಡಿಸುವಂತಿಲ್ಲ
- ಬಲವಂತವಾಗಿ ಕಾಂಪ್ ಆಫ್ ಮಾಡಿಸುವಂತಿಲ್ಲ.
- ವಿಶ್ರಾಂತಿಯಿಲ್ಲದೆ 4 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡಿಸುವಂತಿಲ್ಲ.
- ಕೆಲಸಕ್ಕೆ ಸೇರಿದ ದಿನದಿಂದಲೇ ಇ.ಎಸ್.ಐ. ಮತ್ತು ಪಿ.ಎಫ್. ಅನ್ನು ಕಡಿತಗೊಳಿಸಬೇಕು. (ಇ.ಎಸ್.ಐ ಮತ್ತು ಪಿ.ಎಫ್)


**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಿ:**

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ GATWU**

ಮೈಸೂರು ರಸ್ತೆ ಕಛೇರಿ : ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 026.

ಪೀಣ್ಯ ಕಛೇರಿ : ನಂ. 13, ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560 073.

ಮೊಬೈಲ್ ಸಂಖ್ಯೆ: **9482444011, 9880437877, 9844714476**



Scanned with OKEN Scanner